ಪಾಲಿಸಿದಾಗ, ಅಲ್ಲಿ ಬಂಧನವಿರುತ್ತದೆ.

ಬಂಧನ! ಬಂಧನದ ಯಾವ ರೂಪವನ್ನು ಇದುವರೆಗೆ ನಾನು ನೋಡಿದ್ದೆನೋ, ಅವುಗಳಲ್ಲಿ ಹೆಣ್ಣನ್ನೇ ಬಂಧಿಸಿರುವುದನ್ನು ನೋಡಿದ್ದೆ. ಪುರುಷ ಬಂಧಿಸಲ್ಪಟ್ಟಾಗ್ಯೂ ಉನ್ಮುಕ್ತನಾಗಿದ್ದ, ಸಂಪೂರ್ಣವಾಗಿ ಸ್ವತಂತ್ರನಾಗಿದ್ದ. ಅವನು ಹೆಂಡತಿಯಿದ್ದಾಗ್ಯೂ ಒಂದಕ್ಕಿಂತ ಹೆಚ್ಚು ಪ್ರೇಯಸಿಯರನ್ನು ಇಟ್ಟುಕೊಳ್ಳಬಹುದಿತ್ತು, ಉಪಪತ್ನಿಯರನ್ನು ಇಟ್ಟುಕೊಳ್ಳಬಹುದಿತ್ತು, ಅಲ್ಲಿ ಇಲ್ಲಿ ಫ್ಲರ್ಟ್ ಮಾಡಬಹುದಿತ್ತು, ಆದರೂ ಸಮಾಜದ ದೃಷ್ಟಿಯಲ್ಲಿ ಅವನು ಕ್ಷಮೆಗೆ ಯೋಗ್ಯನಾಗಿಯೇ ಇರುತ್ತಿದ್ದ. ವಾಸ್ತವಿಕವಾಗಿ ನಾನು ನನ್ನ ಬಾಲ್ಯದಿಂದಲೇ ಬಂಧನ ಹರಿದುಹೋದದ್ದನ್ನು ನೋಡಿದ್ದೆ. ವೈವಾಹಿಕ ಬಂಧನದ ವಿಕೃತ ರೂಪ ಒಂದು 'ಫಾಸಿಲ್'ನಂತೆ ನನ್ನ ಮನಸ್ಸಿನ ಬಂಡೆಗಳ ನಡುವೆ ಸುರಕ್ಷಿತವಾಗಿ ಹೂತು ಹೋಗಿತ್ತು.

ದುರ್ಘಟನೆಯ ದಿನಗಳು

'ನನಗೆ ನಿತ್ಯದ ಜಂಜಾಟದಿಂದ ಸಾಕಾಗಿ ಹೋಗಿದೆ! ನೀನು ಕೆಲವು ದಿನ ಎಲ್ಲಿಗಾದರೂ ಏಕೆ ಹೋಗಲ್ಲ?' ಅಪ್ಪಾ ರೇಗಿದ್ದ.

'ನಾನೇಕೆ ಹೋಗ್ಲಿ? ಇದು ನನ್ನ ಮನೆ. ನಾನಿಲ್ಲೇ ಇರ್ತೀನಿ! ನಿಮಗೆ ಕಷ್ಟವಾದರೆ ನೀವೇ ಹೋಗಿ'. ಅಮ್ಮ ಕಿರುಚಿದರು.

'ತುಂಬಾ ವಟವಟ ಅನ್ನೀಯ! ಎರಡು ಬಿಗಿದು ನಿನ್ನ ನಾಲಿಗೆಯನ್ನೇ ಸೀಳಿ ಬಿಡಬೇಕೆಂದು ಅನ್ನಿಸುತ್ತೆ.' ಅಪ್ಪಾ ಕೆಂಡವಾಗಿ ಎದ್ದು ನಿಂತರು.

ಅಪ್ಪನ ಬಡಬಡಿಸುವಿಕೆ ಮುಗಿದಿರಲಿಲ್ಲ, 'ಓಹ್! ನೀನೆಂಥ ಮೂರ್ಖ ಹೆಣ್ಣು, ನನ್ನ ಕೊರಳಿಗೆ ಗಂಟು ಬಿದ್ದೆಯೆಲ್ಲ. ಇದಕ್ಕಿಂತ ನಾನು ಮದುವೆಯೇ ಆಗದಿದ್ರೆ ಚೆನ್ನಾಗಿತ್ತು'. ಹೀಗೆಂದು ಅಪ್ಪಾ ಹೊರಗೆ ಹೋಗುವ ಬಾಗಿಲೆಡೆಗೆ ಹೋದರು.

'ಎಲ್ಲಿಗೆ ಹೋಗ್ತಿದ್ದೀರ?'

'ನರಕಕ್ಕೆ'

'ಇಲ್ಲ, ನೀವು ಹೀಗೆ ನನ್ನನ್ನು ಅವಮಾನ ಮಾಡಿ ಎಲ್ಲೂ ಹೋಗಲಾರಿರಿ'.

'ಮಾನ ಇದ್ದವರಿಗೆ ಅವಮಾನದ ಚಿಂತೆಯಿರುತ್ತೆ', ಅಪ್ಪಾ ಅಮ್ಮನನ್ನು ಜಿಗುಪ್ಸೆಯಿಂದ ನೋಡಿದರು.

'ನನಗೆ ಮಾನ ಇರಲಿ, ಇಲ್ಲದಿರಲಿ; ಆದ್ರೆ ನಾನು ನಿಮ್ಮ ಮಗಳ ತಾಯಿ ಅನ್ನೋದು ನೆನಪಿರಲಿ!'

'ಯಾರಿಗ್ಗೊತ್ತು?' ಅಪ್ಪಾ ಗಡಿ ದಾಟಿ ಹೋದರು. 'ಇದೇನು ಮಾತಾಡ್ತಿದ್ದೀರ?' ಅಮ್ಮ ಕಿರುಚಿದರು.

'ನಿಜವನ್ನೇ ಹೇಳ್ತಿದ್ದೀನಿ', ಅಪ್ಪನ ಸಿಟ್ಟು ಕಡಿಮೆಯಾಗಲಿಲ್ಲ.

'ಅಯ್ಯೋ ದೇವರೇ! ಸ್ವಲ್ಪವಾದರೂ ಯೋಚ್ನೆ ಮಾಡಿ ಮಾತಾಡಿ! ನಿಮ್ಮ ಮಗಳಿಗೇ... ಹೇ ದೇವಾ!' ಅಮ್ಮ ಬಿಕ್ಕಳಿಸಿದಳು.

ಅಪ್ಪಾ ಮುಂದೆ ಬಂದು ಬಾಗಿಲನ್ನು ತೆರೆದರು. ಆದರೆ ಅವರು ತಮ್ಮ ಕಾಲನ್ನು ಹೊರಗಿಡುವುದಕ್ಕೆ ಮೊದಲು ಅಮ್ಮ ಅವರ ತೋಳನ್ನು ಹಿಡಿದು ಒಳಗೆ ಎಳೆದುಕೊಂಡು ಬಾಗಿಲನ್ನು ಮುಚ್ಚಿದರು. ಇದೆಲ್ಲಾ ಎಷ್ಟು ಶೀಘ್ರವಾಗಿ ನಡೆಯಿತೆಂದರೆ, ಅಪ್ಪ ಸುಧಾರಿಸಿಕೊಳ್ಳಲು ಅವಕಾಶವೇ ಸಿಗಲಿಲ್ಲ. ಅವರು ಮನೆಯಿಂದ ಹೊರಗೆ ಹೋಗದಾದರು.

'ನೀವು ಹೀಗೇಕೆ ಹೇಳಿದಿರಿ, ನೀವು ಇದಕ್ಕೆ ಉತ್ತರವನ್ನು ಕೊಡಲೇಬೇಕು'. ಅಮ್ಮ ರೌದ್ರ ರೂಪವನ್ನು ತಾಳಿದ್ದರು.

'ನಾನು ಉತ್ತರಿಸಬೇಕಿಲ್ಲ'. ಅಪ್ಪ ಶಾಂತ ಧ್ವನಿಯಲ್ಲಿ ಹೇಳಿದರು. ಅವರು ಆ ಕ್ಷಣ ಬಹುಶಃ ಒಂದು ತೀರ್ಮಾನಕ್ಕೆ ಬಂದಿದ್ದರು.

'ಇಲ್ಲ, ನೀವು ನನಗೆ ಉತ್ತರವನ್ನು ಕೊಡಲೇ ಬೇಕು! ನೀವು ನನ್ನ ಮೇಲೆ ಇಂಥ ಆರೋಪವನ್ನು ಹೇಗೆ ಮಾಡಿದಿರಿ? ನನ್ನ ಮತ್ತು ನಿಮ್ಮನ್ನು ಹೊರತುಪಡಿಸಿ ನನಗೆ ಬೇರಾರೊಂದಿಗೂ ಸಂಬಂಧವಿಲ್ಲ ಎಂಬುದು ನಿಮಗೆ ಗೊತ್ತಿದೆ'. ಅಮ್ಮ ಈಗ ರೋದಿಸುತ್ತಿದ್ದರು, ಕಿರುಚುತ್ತಲೂ ಇದ್ದರು.

'ಮೆಲ್ಲನೆ ಮಾತಾಡು', ಅಪ್ಪಾ ಹೇಳಿದರು.

'ನಾನ್ಯಾಕೆ ಮೆಲ್ಲನೆ ಮಾತನಾಡಲಿ? ನಾನ್ಯಾವ ಅಪರಾಧವನ್ನು ಮಾಡಿಲ್ಲ', ಅಮ್ಮ ಬಿಕ್ಕಳಿಸಿದರು.

'ಹಾಗಾದ್ರೆ ಕೂತು ಅಳು! ನನ್ನ ಹಿಂದೆ ಏಕೆ ಬಿದ್ದಿದ್ದೀಯ? ನಾನು ನೆಮ್ಮದಿಯಿಂದ ಬದುಕಲು ಏಕೆ ಬಿಡ್ತಿಲ್ಲ?' ಅಪ್ಪಾ ಕಟುವಾಗಿ ಕೇಳಿದರು.

'ನಾನು ನಿಮ್ಮನ್ನು ನೆಮ್ಮದಿಯಿಂದ ಬದುಕಲು ಬಿಡ್ತಿಲ್ವ? ನೀವು ಪರಿಶುದ್ಧರೇ? ನೀವು ನಿಮ್ಮ ಸಂಶೋಧನಾ ವಿದ್ಯಾರ್ಥಿನಿಯರನ್ನು ಪಾಸ್ ಮಾಡಿಸಲು ಅವರಿಂದ ಏನು ತೆಗೆದುಕೊಳ್ತೀರ ಎಂಬುದು ನನಗೆ ಗೊತ್ತಿಲ್ವ? ನೀವು ಅವರನ್ನು ನಿಮ್ಮ ಜೊತೆ ಮಲಗಲು ವಿವಶಗೊಳಿಸುತ್ತೀರ, ನನಗೆ ನಿಮ್ಮ ಬಗ್ಗೆ ಜುಗುಪ್ಸೆ ಬರುತ್ತೆ. ನಾನು ನಿಮ್ಮನ್ನು ಮದುವೆಯಾಗಬೇಕಾಯಿತಲ್ಲ, ಇದು ನನ್ನ ದುರದೃಷ್ಟ', ಅಮ್ಮ ತಮ್ಮ ಮನಸ್ಸಿನ ಕಹಿಯನ್ನು ಹೊರ ಹಾಕಿದರು.

'ಹೌದು, ನಾನು ಅವರನ್ನು ನನ್ನ ಜೊತೆ ಮಲಗಲು ವಿವಶಗೊಳಿಸುತ್ತೇನೆ, ನೀನು ಬಯಸಿದರೆ ನಿನಗೆ ವಿದ್ಯಾರ್ಥಿಗಳ ಲೈನನ್ನೇ ನಿಲ್ಲಿಸುತ್ತೇನೆ', ಅಪ್ಪಾ ಹೇಳಿದರು. ಅವರ ಧ್ವನಿಯಲ್ಲಿ ವಿಚಿತ್ರ ಶಿಥಿಲತೆಯಿತ್ತು. ಯಾವ ವಿಷಯಕ್ಕೆ ಅವರು ರೇಗಬೇಕಿತ್ತೋ ಅದರ ಬದಲು ಅವರು ಶಾಂತರಾಗಿದ್ದರು; ಅವರು ವಿಷವಾರಿದ ಬಾಣವನ್ನು ಚಲಾಯಿಸುತ್ತಿದ್ದರು.

'ನಿಮಗೆ ಹುಚ್ಚು ಹಿಡಿದಿದೆ, ಹೌದು, ಹುಚ್ಚು ಹಿಡಿದಿದೆ, ನೀವೇನು ಹೇಳ್ತಿದ್ದೀರ ಅನ್ನೋದು ನಿಮಗೆ ಗೊತ್ತಾ!' ಅಮ್ಮ ಹೆದರಿದ್ದರು.

'ಗೊತ್ತಿದೆ! ಹೇಳು, ಇನ್ನೇನು ಕೇಳ ಬೇಕೆಂದಿದ್ದೀಯ?' ಅಪ್ಪಾ ಮತ್ತೆ ಬಾಗಿಲೆಡೆಗೆ ಹೋದರು.

ಈಗ ಅಮ್ಮ ಅವರನ್ನು ತಡೆಯಲಿಲ್ಲ.

ಅಪ್ಪಾ ಬಾಗಿಲು ತೆರೆದು, ಮನೆಯಿಂದ ಹೊರ ಹೋದರು. ಅವರ ನಡಿಗೆಯಲ್ಲಿ ಸಂಯಮವಿತ್ತು; ಮನೆಯಲ್ಲಿ ಹೆಂಡತಿಯೊಂದಿಗೆ ಜಗಳ, ಅಪಶಬ್ದಗಳು ಏನೂ ಘಟಿಸಿಯೇ ಇಲ್ಲವೆಂಬಂತೆ ಅಪ್ಪಾ ಶಾಂತಚಿತ್ತರಾಗಿ ಹೊರಗೆ ಹೋಗಿದ್ದರು. ಅಮ್ಮ ಅಲ್ಲಿಯೇ ನೆಲದ ಮೇಲೆ ಕೂತರು. ಹಳೆ ಸರ್ಕಾರಿ ಮನೆ, ನೆಲಕ್ಕೆ ಮೊಜಾಯಿಕ್ ಟೈಲ್ಸ್, ಗಟ್ಟಿಮುಟ್ಟಾದ ಮನೆ, ಆದರೆ ಸದಾ ಥಂಡಿ ವಾತಾವರಣ. ಎರಡನೆಯ ಮಗುವಿನ ಜನ್ಮದ ನಂತರ ಅಮ್ಮನಿಗೆ ಆರ್ಥರೈಟ್ಸ್ ಆಗಿತ್ತು. ಏಕಾಯ್ತು? ಕಾರಣವನ್ನು ವೈದ್ಯರೂ ಹೇಳದಾಗಿದ್ದರು. ಅವರ ಮೊಣಕಾಲುಗಳಲ್ಲಿ, ಬೆರಳುಗಳಲ್ಲಿ ಸಂಧಿನೋವು ಸದಾ ಕಾಡುತ್ತಿತ್ತು. ನೋವು ಒಮ್ಮೆ ಕಡಿಮೆಯಾದರೆ, ಇನ್ನೊಮ್ಮೆ ಹೆಚ್ಚಾಗುತ್ತಿತ್ತು, ಆದರೆ ನೋವೆಂದೂ ನಿಲ್ಲಲೇ ಇಲ್ಲ. ಅಮ್ಮ ಆರಂಭದಲ್ಲಿ ಸಾಕಷ್ಟು ಔಷಧಿಗಳನ್ನು ಸೇವಿಸಿದರು. ಒಮ್ಮೆ ಅಸ್ಥಿರೋಗ ತಜ್ಞರೊಬ್ಬರು ಸ್ಪಷ್ಟವಾಗಿ, ಈ ರೋಗ ವಾಸಿಯಾಗುವುದಿಲ್ಲ, ಇದನ್ನು ಔಷಧಿ ಮತ್ತು ವ್ಯಾಯಾಮಗಳಿಂದ ಹತೋಟಿಯಲ್ಲಿಡಬಹುದು ಎಂದು ಹೇಳಿದರು. ಅಂದಿನಿಂದ ಅಮ್ಮ ಔಷಧಿಗಳ ಸೇವನೆಯನ್ನು ನಿಲ್ಲಿಸಿದರು. ಅಪ್ಪ ಸಹ ಅವರಿಗೆ ಅಡ್ಡಿಪಡಿಸಲಿಲ್ಲ. ವೈದ್ಯರು ಅಮ್ಮನಿಗೆ ಥಂಡಿಯಿಂದ ದೂರವಿರುವಂತೆ ಸಲಹೆಯಿತ್ತಿದ್ದರು. ಅಮ್ಮ ಸದಾ ಕಾಲುಗಳಿಗೆ ಸ್ಲಿಪ್ಪರ್ ಧರಿಸಿರುತ್ತಿದ್ದರು. ಅವರು ನೆಲದ ಮೇಲೆ ಕೂರುತ್ತಿರಲಿಲ್ಲ. ಆದರೆ ಈಗ ಅವರು ಸುಮಾರು ಒಂದೂವರೆ ಗಂಟೆಗಳ ಕಾಲ ಬರಿಗಾಲಿನಲ್ಲಿ, ತಣ್ಣನೆಯ ನೆಲದ ಮೇಲೆ ಕೂತಿದ್ದರು.

ಅವರ ಮುಖ ಬಿಳುಪಾಗಿತ್ತು. ಕಣ್ಣುಗಳು ಬಾಡಿದ್ದು, ಅವಳು ಅನೇಕ ದಿನಗಳಿಂದ ಸರಿಯಾಗಿ ನಿದ್ರೆಯೇ ಮಾಡಿಲ್ಲವೆಂದು ತೋರುತ್ತಿತ್ತು. ಆಗ ನನಗೆ ಹನ್ನೆರಡು ವರ್ಷ, ನಾಲ್ಕು ತಿಂಗಳಾಗಿತ್ತು. ನಾಲ್ಕು ತಿಂಗಳ ಹಿಂದೆಯಷ್ಟೇ ಅಮ್ಮ ನನ್ನ ಹುಟ್ಟುಹಬ್ಬವನ್ನು ಆಚರಿಸಿದ್ದರು.

'ಹ್ಯಾಪಿ ಬರ್ಥ್ ಡೇ ಸುಗಂಧಾ! ಹ್ಯಾಪಿ ಬರ್ಥ್ ಡೇ ಟು ಯೂ!' ಅಮ್ಮ ಹಾಡುವ ಭಂಗಿಯಲ್ಲಿ ಹುಟ್ಟುಹಬ್ಬದ ಶುಭಾಶಯವನ್ನು ಹೇಳಿದ್ದರು. ಆಗ ಮನೆಯಲ್ಲಿ ಅಮ್ಮ ಮತ್ತು ನಾನು, ಇಬ್ಬರೇ ಇದ್ದೆವು. ಯಾವುದೇ ಗದ್ದಲವಿಲ್ಲ, ಸಡಗರವಿಲ್ಲ, ಅಪ್ಪ ಸಹ ಮನೆಯಲ್ಲಿರಲಿಲ್ಲ. ಅಂದು ಅಪ್ಪಾ ಇನ್ನಷ್ಟು ತಡವಾಗಿ ಮನೆಗೆ ಬಂದಿದ್ದರು. ಬೇಕಂತಲೇ ತಡವಾಗಿ ಬಂದಿದ್ದರೋ ಅಥವಾ ಕೆಲಸದ ಒತ್ತಡವಿತ್ತೋ ತಿಳಿಯದು. ಅಮ್ಮ ನನಗೆ ಸ್ಲೈಕ್ಸ್ ಮತ್ತು ಕುರ್ತಾ ಉಡುಗೊರೆ ಕೊಟ್ಟಿದ್ದರು. ಕೆಂಪು ಬಣ್ಣದ ಮೇಲೆ ಬಂಗಾರದ ಬೊಟ್ಟುಗಳಿದ್ದ ಕುರ್ತಾ ನನಗೆ ತುಂಬಾ ಇಷ್ಟವಾಗಿತ್ತು. ಕುರ್ತಾದ ಕೊರಳಿನಲ್ಲಿ ಬಂಗಾರದ ಮುತ್ತುಗಳ ಕಸೂತಿಯಿತ್ತು. ಈ ಉಡುಗೊರೆಗಳು ಬಹುಶಃ ದುಬಾರಿಯಾಗಿದ್ದವು. ಅಮ್ಮ ಇದಕ್ಕಾಗಿ ಹಣವನ್ನು ಮನೆಯ ಖರ್ಚಿನಲ್ಲಿ ಭರಿಸಿದ್ದರು. ನಾನು ಅಮ್ಮನನ್ನು ತಬ್ಬಿದೆ, ಅಮ್ಮನ ಕಣ್ಣುಗಳು ತುಂಬಿ ಬಂದಿದ್ದವು.

ನಂತರ ಅಮ್ಮ ನನ್ನಿಂದ ಕೇಕ್ ಕತ್ತರಿಸಿದ್ದರು. ನಾನು ಕೇಕ್‌ನ ಮೊದಲ ತುಂಡನ್ನು ಅಮ್ಮನಿಗೆ ತಿನ್ನಿಸಿದ್ದೆ; ಎರಡನೆಯ ತುಂಡನ್ನು ಅಮ್ಮ ನನಗೆ ತಿನ್ನಿಸಿದ್ದರು. ಇದು ನಮ್ಮಿಬ್ಬರ ರಹಸ್ಯದ ಸಣ್ಣ ಸಮಾರಂಭವಾಗಿತ್ತು. ಅಂದು ಅಪ್ಪ ಮನೆಗೆ ಬಂದಾಗ ಶಾಂತಿಯಿತ್ತು. ಏಕೆಂದರೆ ಅಪ್ಪಾ ತುಂಬಾ ತಡವಾಗಿ ಮನೆಗೆ ಬಂದಿದ್ದರು, ರಾತ್ರಿಯ ಹನ್ನೊಂದುವರೆ ಗಂಟೆಯಾಗಿತ್ತು. ಅಮ್ಮ ಅವರಿಗೆ